ಶ್ರೀ ಎನ್. ಯೋಗೀಶ ಭಟ್ : ಅಧ್ಯಕ್ಷರೇ, ಕಾರ್ಯಾಚರಣದ ವೆಚ್ಚದ ಹೆಚ್ಚಳ ಕಾರಣಕ್ಕಾಗಿ ಎಂದು reason ಕೊಟ್ಟಿದ್ದೀರಿ. ಅದಕ್ಕೋಸ್ಕರ ತಾವು ರಾಷ್ಟ್ರೀಕೃತ ಬಸ್ ರೂಟ್‌ಗಳಲ್ಲಿ ಎಲ್ಲಿ KSRTC bus ಓಡಾಡುತ್ತವೆ ಅಂತಹ ರೂಟ್‌ಗಳಲ್ಲೆಲ್ಲಾ ಖಾಸಗಿ ಬಸ್‌ಗಳಿಗೆ ಪರವಾನಗಿ ಕೊಟ್ಟಿದ್ದಾ ಎಂದು ಕೇಳಬಯಸುತ್ತೇನೆ.

ಶ್ರೀ ಬಿ. ರಮಾನಾಥ ರೈ : ಡೀಸೆಲ್ ಬೆಲೆ ಏರಿದಾಗ ಆ ಪ್ರಮಾಣದಲ್ಲಿ ನಮ್ಮ ಹೆಚ್ಚಳವನ್ನೂ ಮಾಡಿದ್ದೇವೆ. ನಾನು ಆಗಲೇ ಹೇಳಿದಂತೆ 18 ರೂ ಇದ್ದುದ್ದು 21ಕ್ಕೆ ಏರಿದ ಅನುಗುಣವಾಗಿ ನಮ್ಮ ದರ ಹೆಚ್ಚಿಸಿದೆವು. ಮತ್ತೆ ಡೀಸೆಲ್ ಬೆಲೆ ಸ್ಥಿರತೆಗಾಗಿ ನಾವೂ ಕಾಯುತ್ತಿದ್ದೇವೆ. ನಾವು ಇನ್ನೂ ಕಡಿಮೆ ಮಾಡಲು ಪರಿಶೀಲನೆ ಮಾಡುತ್ತೇವೆ.

ಅಧ್ಯಕ್ಷರು : ಮುಂದಿನ ಮೂರು ಪ್ರಶ್ನೆಗಳನ್ನು ಇನ್ನೊಂದು ದಿವಸ ತೆಗೆದುಕೊಳ್ಳಲಾಗುತ್ತದೆ. Question hour is over. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು. ಇವತ್ತಿನ ಪ್ರಶ್ನೆಗಳು lapse ಆಗಿಲ್ಲ. ಮಾನ್ಯ ಸದಸ್ಯರು ಸಹಕರಿಸಿದರೆ ಇನ್ನೂ ಮೊದಲೇ ಮುಗಿಸಬಹುದಿತ್ತು. ಈಗಲೇ question hour ಗಿಂತ 5 ನಿಮಿಷ ಜಾಸ್ತಿಯಾಗಿದೆ. ಮುಂದಿನ ದಿನಗಳಲ್ಲಿ ತೆಗೆದುಕೊಳ್ಳುತ್ತೇವೆ.

(ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ.ಬಿ. ಚಂದ್ರೇಗೌಡ (ಸಂಸದೀಯ ವ್ಯವಹಾರಗಳ ಸಚಿವರು) : ಅಧ್ಯಕ್ಷರೇ ದಿನಾಂಕ 15-7-2003 ರಂದು ಲಿಖಿತ ಮೂಲಕ ಉತ್ತರಿಸುವ 144 ಪ್ರಶ್ನೆಗಳ ಪೈಕಿ 123 ಉತ್ತರಗಳನ್ನು ಸದನದಲ್ಲಿ ಮುಂಡಿಸುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಯಿತು * (ಅನುಬಂಧ-I)

ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ:- ಪ್ರಶ್ನೆಗಳಿಗೆ ಉತ್ತರಗಳು ಬಾರದಿರುವ ಬಗ್ಗೆ

ಶ್ರೀ ಬಿ. ಸೋಮಶೇಖರ್ : ಅಧ್ಯಕ್ಷರೇ ನನ್ನ ಮತ್ತು ನಮ್ಮ ಕಡೆಯವರ ಪ್ರಶ್ನೆಗಳು ಒಂದಲ್ಲ ಒಂದು ಕಾರಣದಿಂದ....

ಅಧ್ಯಕ್ಷರು : ದಯವಿಟ್ಟು ಆ type ಮಾತನಾಡಬೇಡಿ. ಮಾನ್ಯ ಸದಸ್ಯರು ನನ್ನೊಡನೆ ಸಹಕರಿಸಿದರೆ one hour ನಲ್ಲಿ ನಾನು ಮುಗಿಸುತ್ತೇನೆ. ಸಹಕಾರ ಮಾಡುವುದಿಲ್ಲವಲ್ಲ. ಒಂದೊಂದು ಪ್ರಶ್ನೆಗೂ 15-20 ಸದಸ್ಯರು ಕೇಳುವರಲ್ಲ. ಇವತ್ತಿನವು lapse ಆಗಿಲ್ಲ.

ಶ್ರೀ ಬಿ. ಸೋಮಶೇಖರ್ : ನನ್ನ ಪ್ರಶ್ನೆ rural development ಗೆ ಕೇಳಿದ್ದುದು Revenue Department ಗೆ ವರ್ಗಾವಣೆಯಾಗಿದೆ. ಇವತ್ತು ಅದು ಬಂದಿಲ್ಲ.

ಅಧ್ಯಕ್ಷರು : ಇವು lapse ಆಗಿಲ್ಲ. lapse ಆದರೆ ನೀವು object ಮಾಡಿ. ಇನ್ನೂ ಮೂರು ವಾರ ಇದೆ.

ಶ್ರೀ ಬಿ. ಸೋಮಶೇಖರ್ : ಮುಂದಿನ ವಾರವೇ ಇವನ್ನು ತೆಗೆದುಕೊಳ್ಳಿ.

ಅಧ್ಯಕ್ಷರು : ಆಯಿತು ಆ ರೀತಿ ಬೇಕಾದರೆ ಕೇಳಿ.

ಶ್ರೀ ಜಗದೀಶ್ ಶೆಟ್ಟರ್ : ಕೇವಲ ಮೂರು ಪ್ರಶ್ನೆ ಉಳಿದಿದ್ದವು.

ಅಧ್ಯಕ್ಷರು : No, No, ಲೋಕಸಭೆಯಲ್ಲಿ ಬರೀ ಮೂರೇ ಪ್ರಶ್ನೆ ಆಗುವುದು. ಒಂದು ಗಂಟೆಗೆ. ಗೊತ್ತಾ ನಿಮಗೆ? ಸ್ವಾಮಿ, ನಾನು ನಿಯಮಾವಳಿ ಪ್ರಕಾರ ನಡೆದುಕೊಂಡು ಹೋಗುತ್ತಿದ್ದೇನೆ.

(ಈ ಹಂತದಲ್ಲಿ ಜೆಡಿ(ಎಸ್) ಮತ್ತು ಇತರ ಸದಸ್ಯರು ಧರಣಿ ಆರಂಭಿಸುವರು)

---

* (ಅನುಬಂಧ-I)

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಯಾವ ನಿಯಮಾವಳಿ ಪ್ರಕಾರ ನಡೆಸುತ್ತಿದ್ದೀರಿ?

(ಗೊಂದಲ)

ಅಧ್ಯಕ್ಷರು : ಇವತ್ತು 11 ಪ್ರಶ್ನೆ ಆಗಿದೆ. ನಾನು ನಿಯಮಾವಳಿ ಪ್ರಕಾರ ನಾನು ನಡೆದುಕೊಂಡು ಹೋಗುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಇವತ್ತಿನ ಎಲ್ಲಾ ಪ್ರಶ್ನೆಗೂ ಅವಕಾಶ ಕೊಟ್ಟುಬಿಡಿ, ಏನೂ ತೊಂದರೆ ಆಗುವುದಿಲ್ಲ.

ಅಧ್ಯಕ್ಷರು : ಇಲ್ಲ ಇಲ್ಲ, ನೀವೂ ವಿರೋಧ ಪಕ್ಷದ ನಾಯಕರು BAC Meeting ಗೆ ಬನ್ನಿ, ಇವತ್ತೇ ಕೂತುಕೊಳ್ಳೋಣ. ನೀವು extend ಮಾಡಬೇಕು ಅಂದರೆ ಮಾಡುತ್ತೇನೆ. ನಾನು ನಿಯಮಾವಳಿ ಪ್ರಕಾರ ನಡೆಯುತ್ತಿದ್ದೇನೆ. ದಯವಿಟ್ಟು ನೀವು cooperate ಮಾಡಬೇಕು. ಬನ್ನಿ ಅದಕ್ಕೇನು? ಸಂತೋಷ. ಒಂದು ಗಂಟೆಯೊಳಗೆ ಮುಗಿಸಬೇಕು ಎಂದಿದೆ, ಇನ್ನೂ ಐದು ನಿಮಿಷ ಜಾಸ್ತಿ ಆಗಿದೆ. ದಯವಿಟ್ಟು ಕ್ಷಮಿಸಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಏನೆಂದರೆ ತಮ್ಮ ರೂಲಿಂಗ್ ಮೇಲೇನೇ ಈ ರೀತಿ ಪ್ರತಿಭಟನೆ ನಡೆಸಿದರೆ ಹೇಗೆ?

Mr. Speaker : I am very sorry for this kind of affair. ಇರಿ, ಎಷ್ಟು ಹೊತ್ತು ಇರ್ತಿರೋ ನೋಡೋಣ. Let us see. ನಾನು ರೂಲ್ಸ್ ಪ್ರಕಾರ ನಡೆಯುತ್ತಿದ್ದೇನೆ. Please hear me. Rules ಬಿಟ್ಟು ಹೋಗಿ ಅಂತ ನೀವೇ ಹೇಳುತ್ತಿದ್ದೀರಲ್ಲಾ ಚಂದ್ರೇಗೌಡರೇ, ಚುನಾವಣಾ ಪ್ರಸ್ತಾಪಗಳು – ಬೇಳಿ.

(ಗೊಂದಲ)

Mr. Speaker : I am very sorry. You please hear me. ಇವತ್ತೇ ಬಿಎಸಿ ಮೀಟಿಂಗ್ ಕರೆಯುತ್ತೇನೆ. ಅಲ್ಲಿ ತೀರ್ಮಾನವಾದ ಮೇಲೆ ಕೊಡೋಣ.

(ಗೊಂದಲ)

Mr. Speaker : I can't allow.

(ಗೊಂದಲ)

ಅಧ್ಯಕ್ಷರು : ಓ.ಕೆ. ಮುಂದಿನ ವಾರ ಪ್ರೈಯಾರಿಟಿ ಕೊಡುತ್ತೇನೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಇವತ್ತು ಅಲೋ ಮಾಡಿ.

(ಗೊಂದಲ)

ಅಧ್ಯಕ್ಷರು : ಆಯಿತು. ಮುಂದಿನ ವಾರ ತಮ್ಮ ಪ್ರಶ್ನೇ ಪ್ರೈಯಾರಿಟಿ ಕೊಡುತ್ತೇನೆ ಬಿಡಿ. Don't worry. That I will agree.

(ಗೊಂದಲ)

ಅಧ್ಯಕ್ಷರು : ಮಾನ್ಯ ಕರಡಿ ಸಂಗಣ್ಣನವರೇ, ಏಕೆ ಹೀಗೆ ಮಾಡುತ್ತಿದ್ದೀರಿ? ರೂಲ್ಸ್ ಪ್ರಕಾರ ಹೋಗುತ್ತಿದ್ದರೆ ರೂಲ್ಸ್ ಮುರಿಯಿರಿ ಎಂದು ಹೇಳುತ್ತೀರಾ? I can't understand. I am going according to Rules of Procedure of this House.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಪ್ರೈಯಾರಿಟಿ ಕೊಡಿ.

ಅಧ್ಯಕ್ಷರು : ಪ್ರೈಯಾರಿಟಿ ಕೊಡೋಣ.

(ಗೊಂದಲ)

ಅಧ್ಯಕ್ಷರು : ನಿಮಗೆ ಬಾವಿಗೆ ಬರುವುದಕ್ಕೆ ಹಕ್ಕು ಇದೆ ಎಂದು ಈ ರೀತಿ ಮಾಡಬೇಡಿ.

ಶ್ರೀ ಪಿ.ಜಿ.ಆರ್.ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ಇವತ್ತಿನ ಪ್ರಶ್ನೆಯನ್ನು ಅಲೋ ಮಾಡಿ.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ತಮ್ಮ ತಮ್ಮ ಸ್ಥಳಗಳಿಗೆ ಹೋಗಿ. ಮುಂದಿನ ವಾರ ತಮ್ಮ ಪ್ರಶ್ನೆಗಳಿಗೇ ಪ್ರೈಯಾರಿಟಿಯನ್ನು ಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು : ಬೇಕಾಗಿಲ್ಲ. ಮುಂದಿನ ವಾರ ಪ್ರೈಯಾರಿಟಿ ಕೊಡುತ್ತೇನೆಂದ ಮೇಲೆ ಇನ್ನು ಒಂದು ನಿಮಿಷ ಏನು ಬಂತು? ತಾವುಗಳು ಅಲ್ಲಿ ಬಾವಿಯಲ್ಲಿ ನಿಂತುಕೊಂಡು ಮಾತನಾಡಲೂಕೂಡದು. ನಿಮ್ಮ ನಿಮ್ಮ ಜಾಗಗಳಿಗೆ ಹೋಗಿ ಮಾತನಾಡಿ. ನನಗೂ ಗೊತ್ತಿದೆ. ಎಲ್ಲಾ ಪ್ರಶ್ನೆಗಳೂ ಎಲ್ಲಾ ಸದಸ್ಯರದು ಬಹಳ ಗಂಭೀರವಾದ ಪ್ರಶ್ನೆಗಳನ್ನು ಕಳುಹಿಸಿರುವುದು. ಯಾರು ಅನ್ನಾಡಿ ಪ್ರಶ್ನೆಗಳನ್ನು ಕಳುಹಿಸುವುದಿಲ್ಲ. ಮುಂದಿನ ವಾರ ಪ್ರೈಯಾರಿಟಿ ಕೊಡುತ್ತೇನೆ ಬಿಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ಏಕೆಂದರೆ ಸಭೆಯ ನಡವಳಿಕೆಗಳು ನಡೆಯತಕ್ಕ ಸಂದರ್ಭಗಳಲ್ಲಿ ನಮ್ಮ ಮಾನ್ಯ ಸದಸ್ಯರು ಧರಣಿ ಮಾಡಿರತಕ್ಕ ಸಂದರ್ಭದಲ್ಲಿ ಅವರ ಕ್ಷೇತ್ರಗಳಲ್ಲಿ ಮತ್ತು ರಾಜ್ಯದ ಜನತೆಗೆ ತಮ್ಮ ಸಂದೇಶಗಳು ಹೋಗಬಾರದು. ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್‌ನಲ್ಲಿ ಒಂದು ಗಂಟೆ ಪ್ರಶ್ನೋತ್ತರ ಇರಬೇಕೆಂದು ತೀರ್ಮಾನವಾಗಿಲ್ಲ ಸ್ವಾಮಿ. ತಾವು ಸೂಚನೆಯನ್ನು ಅಧ್ಯಕ್ಷರಾಗಿ ಕೊಟ್ಟಿದ್ದೀರಿ. ಈ ರೀತಿ ನಾನು ಒಂದು ಗಂಟೆಯಲ್ಲಿ ನಾನು ಮುಗಿಸಬೇಕೆಂದಿದ್ದೇನೆ ಎಂದು ಹೇಳಿ. ನಾವೆಲ್ಲಾ ಬಿಸಿನೆಸ್ ಅಡ್ವೈಸರಿ ಕಮಿಟಿ ಸದಸ್ಯರುಗಳೆಲ್ಲಾ ನಿಮಗೆ ವಿನಂತಿ ಮಾಡಿಕೊಂಡಿದ್ದೇವೆ, ಇಲ್ಲಾ ಸ್ವಾಮಿ ಆಗುವುದಿಲ್ಲ, ಎಕ್ಸೆಪ್‌ಷನ್ ಮಾಡಬೇಕೆಂದು ಹೇಳಿ. ಈಗ ಕೆಲವು ಒಂದೊಂದು ಪ್ರಶ್ನೆಗಳಿಗೆ ಮಂತ್ರಿಗಳು ಉತ್ತರವನ್ನು ಕೊಡುವಾಗ 25 ನಿಮಿಷ 30 ನಿಮಿಷ ಕೊಟ್ಟು ಮತ್ತು ಕೆಲವು ದೂರದಿಂದ ಬಂದಿರತಕ್ಕ ಸದಸ್ಯರು ಅವರ ಕ್ಷೇತ್ರಕ್ಕೆ ಸಂಬಂಧಪಟ್ಟಹಾಗೆ ಸಮಸ್ಯೆಗಳು ಬಂದಾಗ ಇಡೀ ಸದನದಲ್ಲಿ ಅವರು ಮಾತನಾಡುವುದಕ್ಕೆ ಅವಕಾಶವಾಗಲಿಲ್ಲವೆಂದರೆ ಹೇಗೆ? ಅದರಿಂದ ಸ್ವಾಮಿ ದಯವಿಟ್ಟು ಇವತ್ತು ನಿನ್ನೆ ಮೊನ್ನೆ ಈ ರೀತಿ ಅನೇಕ ಪ್ರಶ್ನೆಗಳಾಗಿವೆ. ಅದನ್ನು ತಡೆಹಿಡಿಯಿರಿ.

ಅಧ್ಯಕ್ಷರು : ತಡೆಹಿಡಿದಿದ್ದೇವಲ್ಲಾ. ಲ್ಯಾಪ್ಸ್ ಆಗಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ತಡೆಹಿಡಿಯುವುದಲ್ಲ. ಪುನರಾವರ್ತನೆಯಾಗಬಾರದು.

ಅಧ್ಯಕ್ಷರು : ಲ್ಯಾಪ್ಸ್ ಆಗಿಲ್ಲ. ಮುಂದಿನ ದಿವಸಗಳಲ್ಲಿ ತೆಗೆದುಕೊಳ್ಳುತ್ತೇನೆ, ಅದಕ್ಕೆ ಪ್ರೈಯಾರಿಟಿ ಕೊಡುತ್ತೇನೆಂದು ಹೇಳಿದ್ದೇನಲ್ಲಾ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಮಾನ್ಯ ಅಧ್ಯಕ್ಷರೇ, ಬಹಳ ಹಿರಿಯ ಸದಸ್ಯರು ನಮ್ಮ ಪಿ.ಜಿ.ಆರ್.ಸಿಂಧ್ಯಾರವರು. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನ ಮಾಡುವುದಲ್ಲ. ಸದನದ ನಿಯಮಗಳ ಪ್ರಕಾರ ಸದನ ನಡೆಯುತ್ತದೆ. ಪ್ರಶ್ನೋತ್ತರದ ಅವಧಿ ಒಂದು ಗಂಟೆ ಅನ್ನುವುದನ್ನು ನಮ್ಮ ಕರ್ನಾಟಕ ವಿಧಾನಸಭೆ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮಗಳಲ್ಲಿ ಉಲ್ಲೇಖ ಮಾಡಿದೆ. 38ರಲ್ಲಿ ಅದು ಇದೆ. "ಅಧ್ಯಕ್ಷರು ಅನ್ಯಥಾ ನಿರ್ದೇಶಿಸಿದ ಹೊರತು ಪ್ರತಿಯೊಂದು ದಿನದ ಉಪವೇಶನದ ಪ್ರಾರಂಭದ ಮೊದಲನೆಯ ಒಂದು ಗಂಟೆಯ ಅವಧಿಯು, ಪ್ರಶ್ನೆ ಕೇಳುವುದಕ್ಕೆ ಮತ್ತು ಉತ್ತರಿಸುವುದಕ್ಕೆ ಇರತಕ್ಕದ್ದು" ಆ ಗಂಟೆ ಅದಲ್ಲ ನನ್ನ ಪ್ರಶ್ನೆ. ಆದರೆ ಅವರ ಕಳಕಳಿ ಏನು ಇದೆ ಪ್ರಶ್ನೆಗೆ, ಒಂದು ಕಡೆ ಉತ್ತರ ಬಂದಿಲ್ಲ ಎಂದು ಮುಂದಕ್ಕೆ ಹೋಗುವುದಾಗಲಿ, ಅಥವಾ ಬಂದ ಪ್ರಶ್ನೆಗೆ ಸಮಂಜಸವಾದ ಉತ್ತರ ಬಂದಿಲ್ಲವೆಂತಾಗಲಿ ಇಲ್ಲಿ ಅಚ್ಚಾಗಿರತಕ್ಕ ಪ್ರಶ್ನೆಗಳಿಗೆ ಕಾಲಾವಕಾಶ ಇಲ್ಲವೆಂದಾಗಲಿ ಎಷ್ಟು ನಿಯಂತ್ರಣ ತಾವು ಪ್ರಯತ್ನ ಮಾಡಿದರೂ ಆಗುವುದಿಲ್ಲ. ಆದರೆ ನಮ್ಮ ನಮ್ಮಲ್ಲೇ ನಿಯಂತ್ರಣವನ್ನು ಹಾಕಿಕೊಂಡರೆ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಸಿಗುತ್ತದೆ.

ಅಧ್ಯಕ್ಷರು : ಅದು ಮುಖ್ಯ.

ಶ್ರೀ ಡಿ.ಬಿ. ಚಂದ್ರೇಗೌಡ : ದಯಮಾಡಿ ನಾನು ಸದಸ್ಯರುಗಳಲ್ಲಿ ಪ್ರಾರ್ಥನೆ ಮಾಡುತ್ತೇನೆ. ತಾವು ಆಗಲೇ ಅಪ್ಪಣೆ ಕೊಡಿಸಿದ್ದೀರಿ. ಈಗ ಕೊಟ್ಟಿದ್ದನ್ನು ನಾವು ಪ್ರಶ್ನೆ ಮಾಡುವುದಕ್ಕಾಗುವುದಿಲ್ಲ. ತಾವು ಅಪ್ಪಣೆ ಕೊಡುವುದಕ್ಕೆ ಮುಂಚೆ ಅವರು ಕೇಳಿದ್ದರೆ ಮಾತನಾಡಬಹುದಿತ್ತು. ಕೊಟ್ಟುಬಿಟ್ಟಿದ್ದೀರಿ 'Question hour is over' ಅಂತ, ಮುಂದಕ್ಕೆ ಹೋಗಿಬಿಟ್ಟಿದ್ದೇವೆ. ಅದನ್ನು ದಯವಿಟ್ಟು ಪ್ರೈಯಾರಿಟಿ ಮೇಲೆ ಆ ಪ್ರಶ್ನೆಗಳಿಗೆ ತಾವು ಮುಂದಿನ ವಾರದಲ್ಲಿ ತೆಗೆದುಕೊಂಡರೆ ಒಳ್ಳೆಯದು.

ಅಧ್ಯಕ್ಷರು : ಆಗಬಹುದು. ಅದೇನೂ ತೊಂದರೆ ಇಲ್ಲ.

ಸಭೆಯ ಮುಂದಿಡಲಾಗುವ ಕಾಗದಪತ್ರಗಳು

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೇ, ಸಭೆಯ ಮುಂದಿಡಲಾಗುವ ಕಾಗದಪತ್ರಗಳ ಮೊದಲನೇ ಪಟ್ಟಿ ಮಾನ್ಯ ಮುಖ್ಯ ಮಂತ್ರಿಗಳ ಹೆಸರಿನಲ್ಲಿರುವ ಕಾಗದಪತ್ರಗಳು, ಎಂ.ವೈ. ಘೋರ್ಪಡೆ ಹೆಸರಿನ ಮುಂದೆ ಇರುವ ಕಾಗದ ಪತ್ರ ಹಾಗೂ ನನ್ನ ಹೆಸರಿನ ಮುಂದೆ ಇರುವ ಕಾಗದಪತ್ರಗಳನ್ನು ಸದನದ ಮುಂದೆ ಇಡುತ್ತೇನೆ. ಅದೇ ರೀತಿಯಾಗಿ ಶ್ರೀಮಾನ್ ಹೆಚ್.ಕೆ. ಪಾಟೀಲ್ ಅವರ ಹೆಸರಿನ ಮುಂದೆ ಇರತಕ್ಕ ಕಾಗದಪತ್ರಗಳು, ಹಾಗೂ ಲೋಕೋಪಯೋಗಿ ಸಚಿವರಾದ ಶ್ರೀಮಾನ್ ಧರ್ಮಸಿಂಗ್ ಅವರ ಹೆಸರಿನ ಮುಂದೆ ಇರುವ ಕಾಗದಪತ್ರಗಳು, ಮತ್ತು ಶ್ರೀಮಾನ್ ಹೆಚ್.ವಿಶ್ವನಾಥ್ ಅವರ ಹೆಸರಿನ ಮುಂದೆ ಇರುವ ಕಾಗದಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಶ್ರೀ ಆರ್.ವಿ. ದೇಶಪಾಂಡೆ (ಮಾನ್ಯ ಭಾರಿ ಕೈಗಾರಿಕಾ ಸಚಿವರು) : ಮಾನ್ಯ ಅಧ್ಯಕ್ಷರೇ, ನನ್ನ ಹೆಸರಿನ ಮುಂದೆ ಇರುವ ಕಾಗದಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಸಗೀರ್ ಅಹಮದ್ ಅವರು ಇಲ್ಲ, ಶಿವಕುಮಾರ್‌ರವರು ಇಲ್ಲ, ರಮಾನಾಥ್ ರೈ ಇಲ್ಲ, ಹೆಚ್.ಎಂ. ರೇವಣ್ಣ ಅವರು ಇಲ್ಲ, ಜಿ.ಪರಮೇಶ್ವರ್ ಇಲ್ಲ, ಅಲ್ಲಂ ವೀರಭದ್ರಪ್ಪ ಅವರು ಇಲ್ಲ, ಇನಾಂದಾರ್ ಅವರೂ ಇಲ್ಲ. ಏನು ಇವರೆಲ್ಲಾ ಮೇಲ್ಮನೆಯಲ್ಲಿದ್ದಾರೋ ಅಥವಾ ಇನ್ನೆಲ್ಲಿಯಾದರೂ